
ಹೀಗಿರುವುದು ಸಾಧ್ಯವೆ? ಇರುವುದಾದರೆ ಅವಳು ಯಾವ ಲೋಕದವಳು ಎಂದು ಮನಸ್ಸು ಪುರಾಣಗಳನ್ನು ನೆನೆದು ಸೋಲುತ್ತದೆ. ಈ ಕವಿ ಹುಚ್ಚನೇ ಎಂಬ ಪ್ರಶ್ನೆಯೂ ಹುಟ್ಟದಿರದು.

ತೊಡೆಗಳನ್ನು ಬಾಳೆದಿಂಡಿಗೆ, ಕುಚಗಳನ್ನು ಕುಂಭಕ್ಕೆ, ಕಣ್ಣ ಹುಬ್ಬುಗಳನ್ನು ಬಿಲ್ಲಿಗೆ ಅಥವಾ ಚೇಳಿನ ಕೊಂಡಿಗೆ, ಕಣ್ಣುಗಳನ್ನು ಕಮಲಕ್ಕೆ, ಕಡಲಿಗೆ, ಮೀನಿಗೆ, ಸೊಂಟವನ್ನು ಸಿಂಹ ಕಟಿಗೆ ಅಥವಾ ಗಗನಕ್ಕೆ (ಗಗನ ಜಘನೆ) – ಹೀಗೆ ಕವಿಯ ವರ್ಣನೆ ಸಾಗಿದೆ. ಈ ಕವಿಯ ಹಿಂದಿರುವ ಅರ್ಥವೇನೆಂದು ಬುದ್ಧಿ ಕಸರತ್ತಿಗೆ ಇಳಿಯುತ್ತದೆ.

ಐದು ತೊಡೆಗಳ, ಆರು ಸ್ತನಗಳ, ನಾಲ್ಕು ಹುಬ್ಬುಗಳ, ಏಳು ವಿಶಾಲ ನೇತ್ರಗಳ, ಹನ್ನೆರಡು ನುಲಿವ ಸೊಂಟಗಳ ತಂದಿರಿಸಿ, ಇಂಥ ಸುಲಕ್ಷಣೆಯಾದ ಅವಳಿಗೂ ನಿನಗೂ ಮದುವೆಯಾಗಬೇಕೆಂದು ಕಸ್ತೂರಿರಂಗನಿಗೆ ಕವಿ ಹೇಳುತ್ತಾನೆ. ಈ ಲಕ್ಷಣಗಳನ್ನು ಚಿತ್ರಕಾರನಿಗೆ ಹೇಳಿ ಚಿತ್ರ ಬಿಡಿಸೆಂದರೆ ಹೇಗಿರಬಹುದು? ಆ ಕಲಾವಿದ ತಲೆಗೂದಲು ಕೆರೆದುಕೊಂಡು ಹುಚ್ಚನಾದರೂ ಹೆಚ್ಚಲ್ಲ! ಇಲ್ಲವೆ ಹುಚ್ಚಾಟ ಸಾಕು ಹೊರಡೆಂದರೂ ಅಂದಾನು. ಒಂದು ವೇಳೆ ತಾಳ್ಮೆಯಿಂದ ಚಿತ್ರ ಬಿಡಿಸಿದರೆ ಆ ಚಿತ್ರ ಸುಲಕ್ಷಣದ ಹೆಣ್ಣಿನ ಚಿತ್ರವಂತೂ ಆಗದು. ಇದೆಂತಹ ಘನಪದ್ಯ ತೆಗೆಯೆಂದು ಅಸಡ್ಡೆ ತೋರಿದರೂ ಹೆಚ್ಚಲ್ಲ. ಆದರಿದು ಗಹನ ಪದ್ಯವಂತೂ ಹೌದು.

ಪದ್ಯವನ್ನು ಗಮನವಿಟ್ಟು ಗಮನಿಸಿದಾಗ ಸುಳಿವೊಂದು ಕಾಣಿಸುವುದು. ಪದ್ಯದ ಪ್ರತಿಯೊಂದು ಪಾದದಲ್ಲಿಯೂ 'ಕನ್ಯೆ' ಎಂಬ ಪದವಿದೆ. ಇದು ಅರ್ಥೈಸುವಿಕೆಗೆ ಆಧಾರಪದ. ಇದರ ಮೂಲಕ ಮನಸ್ಸು ರಾಶಿಚಕ್ರದ ಕಡೆಗೆ ಹರಿಯಲಿ, ಮೇಷರಾಶಿಯಿಂದ ಮೀನ ರಾಶಿಯವರೆಗೆ.

ಹನ್ನೆರಡು ರಾಶಿಗಳಲ್ಲಿ ಆರನೆಯದು ಕನ್ಯಾರಾಶಿ. ಇದನ್ನು ಒಂದೆಂದು ಭಾವಿಸಿ ಎಡಕ್ಕೆ ಹೋದಾಗ, ಐದನೆಯದಾಗಿ ಸಿಗುವುದು ಮಕರರಾಶಿ. ಅಂದರೆ ಕನ್ಯೆಯದು ಮೊಸಳೆ ದೇಹದಂಥ ಬಲಿಷ್ಠ ತೊಡೆಗಳು. ಆರನೆಯದು ಕುಂಭರಾಶಿ, ಅರ್ಥಾತ್ ಕನ್ಯೆ ಕುಂಭಕುಚೆ. ನಾಲ್ಕನೆಯದು ಧನುಸ್ಸು, ಅವಳ ಹುಬ್ಬುಗಳು ಬಿಲ್ಲಿನಂತಿರಲು ಕಾರಣವಾಗಿದೆ. ಏಳನೆಯದು ಮೀನರಾಶಿ. ಅಂದರೆ ಆ ಕನ್ಯೆ ಮೀನಾಕ್ಷಿ. ಹನ್ನೆರಡನೆಯದು ಸಿಂಹರಾಶಿ. ಹಾಗಾಗಿ ಅವಳದು ಸಿಂಹ ಕಟಿ. ಅಂದಮೇಲೆ ಅವಳು 'ಸುಲಕ್ಷಣಾಢ್ಯೆ' ತಾನೆ! ಇಂಥ ಸೌಂದರ್ಯರಾಶಿ ನಿನಗೆ ಮಡದಿಯಾಗಬೇಕೆಂದು ಕವಿ ಕಸ್ತೂರಿರಂಗನಾಯಕನಿಗೆ ಹೇಳುತ್ತಾನೆ. ಆ ಕಸ್ತೂರಿರಂಗನಾಯಕ ಒಬ್ಬ ಅರಸ. ಅವನಿಗೇ ಕವಿ ಹೇಳಿದ್ದಾನು. ಕಸ್ತೂರಿರಂಗನಾಯಕ ದೇವರೂ ಆಗಿರುವುದರಿಂದ, ಅವನಿಗೂ ಹೇಳಿರಬಹುದು.



ಈ ಚಾಟುಪದ್ಯ ಮನಸ್ಸನ್ನು ರಾಶಿಚಕ್ರದಲ್ಲಿ ಸುತ್ತಾಡಿಸಿ ಆ ಕನ್ಯೆಯ ಪ್ರತಿಮೆಯ ಮುಂದೆ ನಿಲ್ಲಿಸಿದಾಗ 'ರಸಿಕರಂಜನೆ'ಯ ಅವಳ ಚೆಲುವು ಮನಸ್ಸಿನಲ್ಲಿ ಅನಾವರಣಗೊಳ್ಳುತ್ತದೆ. ಚಮತ್ಕಾರವೂ ಕಾವ್ಯದೊಂದು ಭಾಗ ಎಂಬುದಕ್ಕೆ ಕಾವ್ಯಲೋಕದಲ್ಲಿ ಇಂಥ ಅನೇಕ ಉದಾಹರಣೆಗಳು ಸಿಗುತ್ತವೆ.